ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಎಂ ಆರ್ ಎಸ್ ವಕೀಲರಿಂದಃ

ಅಪಘಾತದ ದಿನ ನಾನು ಕೆಲಸ ಮುಗಿಸಿಕೊಂಡು ಹೈಸ್ಕೂಲ್ ಮೈದಾನದ ಕಡೆ ಹೋಗುತ್ತಿದ್ದೆನು. ಅಪಘಾತದ ದಿನ ನಾನು ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಸದರಿ ವಾಹನವು ನನಗೆ ಸೇರಿದ ವಾಹನ. ನನ್ನ ದ್ವಿ ಚಕ್ರ ವಾಹನದ ಆರ್ ಸಿ ಮತ್ತು ವಿಮಾ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನನ್ನ ಬಳಿ ವಾಹನ ಚಾಲನಾ ಪರವಾನಗಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ಅಪಘಾತವಾದ ಸ್ಥಳದಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ನಾನು ಹೋಗುತ್ತಿದ್ದ ರಸ್ತೆಯು ಸುಮಾರು 30 ಅಡಿ ಅಗಲ ರಸ್ತೆ ಎಂದರೆ ಸರಿ. ಸದರಿ ರಸ್ತೆಯ ಮಧ್ಯದಲ್ಲಿ ಬಿಳಿ ಬಣ್ಣದ ಪಟ್ಟಿ ಇದ್ದು ಒಂದು ಕರೆಯಿಂದ ವಾಹನ ಹೋಗುತ್ತಿದ್ದರೆ ಇನ್ನೊಂದು ಕಡೆಯಿಂದ ವಾಹನಗಳು ಬರುತ್ತಿರುತ್ತವೆ ಎಂದರೆ ಸರಿ.

ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಸ್ಕೆಚ್ ಅನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಸದರಿ ಸ್ಕೆಚ್ ಅನ್ನು ಹಾಕಿದರೆ ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದು ತಿಳಿದು ಬರುತ್ತದೆ ಎಂದು ಸದರಿ ಸ್ಕೆಚ್ ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ನಿರ್ಲಕ್ಷ್ಯತನದಿಂದ ಆಗಿದೆ ಎಂದರೆ ಸರಿಯಲ್ಲ. ನಾನು ರಸ್ತೆಯ ಎಡಬದಿಯಲ್ಲಿ ವಾಹನವನ್ನು ಚಲಾಯಿಸಿದ್ದರೆ ಅಪಘಾತವು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನಗೆ ಪ್ರಜ್ಞೆ ಇತ್ತು ಎಂದರೆ ಸರಿ.

ಅಪಘಾತವಾದ ಸ್ಥಳದಿಂದ ನಮ್ಮ ಮನೆ 2-3 ಕಿ.ಮೀ ಇರುತ್ತದೆ. ನಂತರ ನನ್ನನ್ನು ನನ್ನ ಮಗಳು ನಾರಾಯಣ ಆಸ್ಪತ್ರೆಗೆ

ಕರೆದುಕೊಂಡು ಹೋದಳು. ಸದರಿ ನಾರಾಯಣ ಆಸ್ಪತ್ರೆಯಲ್ಲಿ ಅಪಘಾತವು ಹೇಗೆ ಆಗಿರುತ್ತದೆ ಎಂದು ವೈದ್ಯರ ಬಳಿ ತಿಳಿಸಿರುತ್ತೇನೆ ಎಂದರೆ ಸರಿ. ಅಪಘಾತಕ್ಕೆ ಸಂಬಂಧಪಟ್ಟಂತೆ ದೂರನ್ನು ನನ್ನ ಮಗಳೇ ನೀಡಿರುತ್ತಾಳೆ. ಅಪಘಾತವಾದ್ದರಿಂದ ನಾನು 10 ದಿನಗಳ ಕಾಲ ಆಸ್ಪತ್ರೆಯಲ್ಲಿ ಇದ್ದೆನು.

ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಚಿಕಿತ್ಸೆಯನ್ನು ನಾರಾಯಣ ಆಸ್ಪತ್ರೆ ಯಲ್ಲಿ ಮೊದಲು ಚಿಕಿತ್ಸೆ ಪಡೆದು ನಂತರ ಬೇರೆ ಎಲ್ಲಿಯೂ ಚಿಕಿತ್ಸೆ ಪಡೆದುಕೊಂಡಿಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಒಂದು ವಾರ ಬಿಟ್ಟು ಪುನಃ 7 ದಿನ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ.

ಈ ಹಂತದಲ್ಲಿ ವಕೀಲರ ಕೋರಿದ ಕಾರಣ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ ಬಿ.ಟಿ)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು